ಅ) ರೋಫೆಕಾಕ್ಸಿಬ್ (Rofecoxib)

ಆ) ವ್ಯಾಲ್ಡೆಕಾಕ್ಸಿಬ್ (Valdecoxib)

ಆ) (1) ನಿರ್ಬಂಧಿಸಿದ ಔಷಧಗಳ ಪಟ್ಟಿಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗುತ್ತದೆ.

(2) ಸದರಿ ನೋಟಿಫಿಕೇಷನ್‌ಗಳನ್ನು ರಾಜ್ಯದಲ್ಲಿರುವ ಔಷಧ ತಯಾರಕರ ಸಂಘ ಮತ್ತು ಔಷಧ ವ್ಯಾಪಾರಿಗಳ ಸಂಘಗಳಿಗೆ ಕಳುಹಿಸಲಾಗಿದೆ ಹಾಗೂ ಇಲಾಖೆಯ ಎಲ್ಲಾ ಅಮಲುಜಾರಿ ಅಧಿಕಾರಿಗಳಿಗೆ ನೀಡಿದೆ. ಯಾವುದೇ ನಿರ್ಬಂಧ ವಿಧಿಸಿದ ಔಷಧಿಗಳು ಮಾರುಕಟ್ಟೆಯಲ್ಲಿ ಕಂಡುಬಂದರೆ ಆ ಔಷಧಿಗಳನ್ನು ಜಪ್ತಿ ಮಾಡಿ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಅಮಲು ಜಾರಿ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. ಔಷಧ ನಿಯಂತ್ರಣ ಇಲಾಖೆ ಅಮಲು ಜಾರಿ ಅಧಿಕಾರಿಗಳು ಈ ಕುರಿತು ಸದಾ ನಿಗಾ ಇಟ್ಟಿರುತ್ತಾರೆ.

ಇಂತಹ ಔಷಧಿಗಳ ಹೆಸರನ್ನು ಕೇಂದ್ರ ಸರ್ಕಾರದ ಔಷಧ ನಿಯಂತ್ರಣ ಇಲಾಖೆಯ ವೆಬ್‌ಸೈಟ್‌ನಲ್ಲೂ ಪ್ರದರ್ಶಿಸಲಾಗಿದೆ.

ಇ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರನ್ನು ಬದಲಾಯಿಸಿ ಪುನರ್ ಮಾರಾಟ ಮಾಡಿರುವ/ಮಾಡುತ್ತಿರುವ ಯಾವುದೇ ಪ್ರಕರಣ ಇದುವರೆಗೂ ಕಂಡುಬಂದಿಲ್ಲ. ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರನ್ನು ಬದಲಾಯಿಸಿ, ಪುನರ್ ಮಾರಾಟ ಮಾಡುತ್ತಿರುವ ಪ್ರಕರಣ ಕಂಡುಬಂದಲ್ಲಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940ರ ಪ್ರಕಾರ ಸೆಕ್ಷನ್ 26ಎ ಉಲ್ಲಂಘನೆಗಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗುವುದು ಹಾಗೂ ಸೆಕ್ಷನ್ 28ಬಿ ಪ್ರಕಾರ ಗರಿಷ್ಠ 03 ವರ್ಷ ಸಜೆ ಹಾಗೂ ರೂ. 5000/–ದವರೆಗೆ ದಂಡಕ್ಕೆ ಗುರಿಯಾಗುತ್ತಾರೆ.

624 (1131) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಪಶುವೈದ್ಯ ಚಿಕಿತ್ಸಾಲಯ ಹಾಗೂ ಪಶುಘಟಕಗಳ ಸಂಖ್ಯೆ ಎಷ್ಟು ?

ಆ) ಈ ಚಿಕಿತ್ಸಾಲಯ ಹಾಗೂ ಘಟಕಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಮುಂದಾಗಿದೆಯೇ ?

ಇ) ಹಾಗಿದ್ದಲ್ಲಿ, ಎಷ್ಟು ಕೇಂದ್ರ ಘಟಕಗಳನ್ನು ಮೇಲ್ದರ್ಜೆಗೇರಿಸಲಾಗುವುದು, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

ಈ) ಈ ಚಿಕಿತ್ಸಾಲಯಗಳಲ್ಲಿ ಅಗತ್ಯ ಸಿಬ್ಬಂದಿವರ್ಗ ಇದೆಯೇ ; ಇಲ್ಲದಿದ್ದಲ್ಲಿ, ಸಿಬ್ಬಂದಿಯ ನೇಮಕಕ್ಕೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

ಶ್ರೀ ರೇವೂ ನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) :–

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಒಟ್ಟು 20 ಪಶುಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳು ಈ ಕೆಳಗಿನಂತಿವೆ :–

(1)	ಪಶು ಆಸ್ಪತ್ರೆ	...	01
(2)	ಪಶುಚಿಕಿತ್ಸಾಲಯಗಳು	...	14
(3)	ಸಂಚಾರಿ ಪಶುಚಿಕಿತ್ಸಾಲಯಗಳು	...	03
(4)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	...	01
(5)	ಕೃತಕ ಗರ್ಭಧಾರಣಾ ಕೇಂದ್ರ	...	01
		ಒಟ್ಟು	20

ಆ) ಇಲಾಖೆಯಲ್ಲಿ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶುಚಿಕಿತ್ಸಾಲಯ/ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೆ ಏರಿಸುವ ಕಾರ್ಯಕ್ರಮವಿದ್ದು ಹಂತಹಂತವಾಗಿ ಮಾಡಲಾಗುತ್ತಿದೆ.

ಇ) ಪ್ರಸ್ತುತ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು, ಚಿಕ್ಕಜೋಗಿಹಳ್ಳಿ, ಗುಡೇಕೋಟೆ, ಹೊಸಹಳ್ಳಿ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮತ್ತು ರಾಂಪುರ, ಬಡಲೇಡಕು, ನಿಂಬಳಗೇರಿ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು. ಈ ಬಗ್ಗೆ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ. ಆದರೆ ಅವಶ್ಯಕತೆಗನುಗುಣವಾಗಿ ಪದವೀಧರರ ಪಶುವೈದ್ಯರ ಲಭ್ಯತೆ ಮೇಲೆ ಮಾಡಲಾಗುತ್ತಿದ್ದು ಉನ್ನತೀಕರಣ ಮಾಡುವ ವೇಳೆಯಲ್ಲಿ ಕೂಡ್ಲಗಿ ತಾಲ್ಲೂಕಿನ ಈ ಮೇಲ್ಕಂಡ ಪಶುವೈದ್ಯ ಸಂಸ್ಥೆಗಳನ್ನು ಉನ್ನತೀಕರಿಸಲು ಕ್ರಮವಹಿಸಲಾಗುವುದು.

ಈ) ಈ ಪಶುವೈದ್ಯ ಸಂಸ್ಥೆಗಳಲ್ಲಿ ಹಲವು ಹುದ್ದೆಗಳು ಭರ್ತಿಯಾಗಿದ್ದು, ಇನ್ನು ಹಲವು ಹುದ್ದೆಗಳು ಭರ್ತಿಯಾಗದೇ ಖಾಲಿ ಇರುತ್ತದೆ. ತಾಲ್ಲೂಕಿನಲ್ಲಿ ಒಟ್ಟು 75 ಮಂಜೂರಾದ ಹುದ್ದೆಗಳಲ್ಲಿ 46 ಭರ್ತಿಯಾಗಿದ್ದು, 29 ಹುದ್ದೆಗಳು ಖಾಲಿ ಇರುತ್ತವೆ. ಅವುಗಳ ವಿವರ ಈ ಕೆಳಕಂಡಂತೆ ಇದೆ :-

ಕ್ರ ಸಂ.	ಹುದ್ದೆಯ ಹೆಸರು		ಮಂ	ಭರ್ತಿ	ಖಾಲಿ
(1)	ಸಹಾಯಕ ನಿರ್ದೇಶಕರು	...	01	01	01
(2)	ಪಶುವೈದ್ಯಾಧಿಕಾರಿ	...	16	03	13
(3)	ಪಶುವೈದ್ಯಕೀಯ ಮೇಲ್ವಿಚಾರಕರು	...	01	00	01
(4)	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	...	09	09	00
(5)	ಪಶುವೈದ್ಯಕೀಯ ಪರೀಕ್ಷಕರು	...	08	03	05
(6)	ಪಶುವೈದ್ಯಕೀಯ ಸಹಾಯಕರು	...	04	03	01

(7) ವಾಹನ ಚಾಲಕರು	...	01	00	01
(8) ಡಿ-ದರ್ಜೆ ನೌಕರರು	...	35	27	08
	ಒಟ್ಟು	75	46	29

4 ಸಹಾಯಕ ನಿರ್ದೇಶಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕಟಣೆ ಹೊರಡಿಸಲಾಗಿದೆ. ಅಲ್ಲದೆ ನೇರ ನೇಮಕಾತಿ ಕೋಟಾದ ಅಡಿಯಲ್ಲೂ 90 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. ನೇರ ನೇಮಕಾತಿಯ ಮುಖಾಂತರ ಖಾಲಿ ಹುದ್ದೆಗಳನ್ನು ತುಂಬಲು ವೇಳೆ ತಗಲುವುದರಿಂದ ಸದ್ಯಕ್ಕೆ ಖಾಲಿ ಇರುವ ಸಹಾಯಕ ನಿರ್ದೇಶಕ ಹುದ್ದೆಗಳನ್ನು ಪಶುವೈದ್ಯಾಧಿಕಾರಿಗಳಿಗೆ ಮುಂಬಡ್ತಿ ಮುಖೇನ ತಾತ್ಕಾಲಿಕವಾಗಿ ಸ್ವಯಂವೇತನ ಶ್ರೇಣಿ ಮೇರೆ (ಓಪಿಜಿ) ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ ಮತ್ತು ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮದಡಿ ರಾಜ್ಯಾದ್ಯಂತ 276 ಪಶುವೈದ್ಯಾಧಿಕಾರಿಗಳನ್ನು ತುಂಬಲು ಪ್ರಕಟಣೆ ಹೊರಡಿಸಿ ಅರ್ಜಿ ಆಹ್ವಾನಿಸಲಾಗಿದ್ದು, ಬಂದಿರುವ ಅರ್ಜಿಗಳು ಪರಿಶೀಲನೆಯಲ್ಲಿವೆ ಮುಂಬಡ್ತಿ ಪ್ರಕ್ರಿಯೆ ಮತ್ತು ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಕೂಡ್ಲಿಗಿ ತಾಲ್ಲೂಕಿನಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರುಗಳು ಮತ್ತು ಪಶುವೈದ್ಯಾಧಿಕಾರಿಗಳ ಹುದ್ದೆಗೆ ನೇಮಕ ಮಾಡಲು ಸಹ ಕ್ರಮ ವಹಿಸಲಾಗುವುದು.

625 (626) ಶ್ರೀ ಧ್ರುವನಾರಾಯಣ, ಆರ್.(ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು (ವಿದ್ಯಾರ್ಥಿ ವೇತನ) ಭರಿಸಲು ಸರ್ಕಾರ ಕೈಗೊಂಡ ನಿರ್ಣಯವನ್ನು ಅನುಷ್ಠಾನಗೊಳಿಸಲಾಗಿದೆಯೇ ;

ಆ) ಅನುಷ್ಠಾನಗೊಳಿಸದಿದ್ದಲ್ಲಿ ಕಾರಣವೇನು ;

ಇ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಅನುದಾನ ದೊರೆತಿದೆಯೆ ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :-

ಅ) ಹೌದು ;

ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. 1.00 ಲಕ್ಷದ ಮಿತಿಯೊಳಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ಕೇಂದ್ರ ಪುರಸ್ಕೃತ ಯೋಜನೆಯಡಿ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಸದರಿ ಕೋರ್ಸುಗಳಿಗೆ ಸರ್ಕಾರಿ ಸೀಟಿಗೆ ನಿಗಧಿಪಡಿಸಿದ ಶುಲ್ಕವನ್ನು ಮಂಜೂರು ಮಾಡಲಾಗುತ್ತದೆ ಹಾಗೂ ಪರಿಶಿಷ್ಟ